ಒಂದಾಣೆ ಮಾಲೆ 284

ಮರೆವೂ ಮರೆವು

(ಒಂದೇ ದೃಶ್ಯದ ನಗೆನಾಟಕ)

*

ರಚಯಿತ:

'ರಸಿಕ', ಪುತ್ತಿಗೆ.

*

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಗುಣಹೊಂದಿದ ಕ್ಷಯರೋಗಿಗಳಿಗೆ ಹೊಸ ಉದ್ಯಮಗಳು ಮತ್ತು ಕಸಬುಗಳು

ವೈವಿಧ್ಯವಿಲ್ಲದ ನೀರಸ ಹಾಗೂ ನಿಷ್ಫಲ ಜೀವನದ ಏಕಾಂತದ ವರುಷಗಳನ್ನು ನಿಧಾನವಾಗಿ ದೂಡುವುದನ್ನು ತಪ್ಪಿಸಿ, ಹೊಸ ಉದ್ಯಮಗಳನ್ನೂ ಕಸಬುಗಳನ್ನೂ ಕಲಿಸಿ, ಅವರ ಜೀವನವನ್ನು ಪ್ರಯೋಜನಕಾರಿಯಾಗಿ ಸಂತಸದಲ್ಲಿ ಕಳೆವಂತೆ ಸಹಾಯಮಾಡುವುದರಿಂದ—ಆ ಜನರ ಜೀವನದಲ್ಲಿ ಅದೆಷ್ಟು ಆನಂದವನ್ನು ತುಂಬಿದೆವೆಂಬುದನ್ನು ನಾವು ತಿಳಿವಾಗ, ಅದರಿಂದ ಎಷ್ಟು ಸುಫಲ ಲಭಿಸುವುದೆಂಬುದನ್ನು ಗಮನಿಸುವಾಗ, ಅವರನ್ನು ಪುನಃ ಉದ್ಯೋಗದಲ್ಲಿ ತೊಡಗಿಸುವುದಕ್ಕಿಂತ ಹೆಚ್ಚಿನ ಲಾಭಕರವಾದ ವಿನಿಯೋಗ ಮತ್ತಾವುದಿದೆ?



ಕ್ಷಯರೋಗಿಗಳನ್ನು ಪುನಃ ಉದ್ಯೋಗಗಳಲ್ಲಿ ತೊಡಗಿಸುವ ಸಲುವಾಗಿ ನಿಮ್ಮ ಕ್ಷಯರೋಗ ಸಂಘಗಳಿಗೆ ಹಣವು ಅವಶ್ಯವಿದೆ. ಈ ಹಣವನ್ನು ಸಂಗ್ರಹಿಸಲು ಮುದ್ರೆ ಮಾರಾಟ ಚಳವಳವು ಉತ್ತಮ ವಿಧಾನವಾಗಿರುತ್ತದೆ. ಜನರು ಕ್ಷಯರೋಗ ಮುದ್ರೆಗಳನ್ನು ಕೊಂಡುಕೊಳ್ಳಲೇಬೇಕು.

ಒಂದು ಟಿ.ಬಿ. ಮುದ್ರೆಯ ಕ್ರಯ ಹತ್ತು ನಯೆ ಪೈಸೆ ಮಾತ್ರ.

ಇವು ಈ ಕೆಳಗಿನವರಲ್ಲಿ ದೊರೆವುವು:

ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯದ ಕ್ಷಯರೋಗ ಸಂಸ್ಥೆ, ಗವರ್ನಮೆಂಟ್ ಟಿಬಿ ಸೆನಿಟೋರಿಯಂ, ಓಲ್ಡ್ ಮದ್ರಾಸ್ ರಸ್ತೆ, ಬೆಂಗಳೂರು–8 ಮತ್ತು ಮೈಸೂರು ರಾಜ್ಯದ ಇತರ ಏಜನ್ಸಿಗಳಿಂದ.

ಹನ್ನೊಂದನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ.

(ಭಾರತ ಕ್ಷಯರೋಗ ಸಂಘ, ನವದೆಹಲಿ, ಇವರ ಹೊಣೆಗಾರಿಕೆಗೊಳಗಾದುದು.)

ಈ ಸ್ಥಳ—

"ಒಂದಾಣೆ ಮಾಲೆ," ಮಂಗಳೂರು

—ಇವರ ಸೇವಾದಾನ.

ಒಂದು ಮಾತು.

ಓದುಗರೇ,

ಇದೊಂದು ನಗೆ ನಾಟಕ. ಒಂದೇ ದೃಶ್ಯದಲ್ಲಿ, ಸುಮಾರು ಒಂದು ಗಂಟೆಯ ತನಕ ಜನರನ್ನು ನಗೆಗಡಲಿನಲ್ಲಿ ತೇಲಿಸಬಹುದು. ಈ ನಾಟಕವನ್ನು ನಮ್ಮ ಶಾಲಾ ಹುಡುಗರಿಗಾಗಿ ಬರೆಯಲಾಯಿತು. ನಮ್ಮ ಶಾಲೆಯ ೧೦ನೇ ಇಯತ್ತೆಯ ವಿದ್ಯಾರ್ಥಿಗಳು ಕೇವಲ ೫ ದಿನದ ಪ್ರಾಕ್ಟೀಸಿನಿಂದ ಯಶಸ್ವಿಯಾಗಿ ಅಭಿನಯಿಸಿದ್ದಾರೆ ಈ ನಾಟಕವನ್ನು. ಪ್ರಧಾನ ಪಾತ್ರ ಜೋಶಿ ಮರೆವಿನ ಮೂಟೆ; ಪಂಚಾಂಗದ ಪೂಜಕ. ಅವನ ಹೆಂಡತಿ ಸತರ್ಕ ಮಾಡುವವಳು. ತುಕ್ರ ಹಳ್ಳಿಯವ. ತಿಮ್ಮ ಅಧಿಕ ಪ್ರಸಂಗಿ ಕೆಲಸಗಾರ. ಬ್ಯಾರಿ ವ್ಯಾಪಾರಿ, ಅಂಚೆಯಾಳು ಪೋಷಕ ಪಾತ್ರ.

"ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಂ" ಎಂದು ತಿಳಿದವರ ಮತ. ಈ ನಾಟಕದ ಉದ್ದೇಶ ನಗೆಯಾಡಿಸುವುದು. ಅಂತೇ ಶಾಲಾ ಹುಡುಗರು ಯಶಸ್ವಿಯಾಗಿ ಅಭಿನಯಿಸಿ, ಹೆತ್ತವರ ಮನಸ್ಸಿಗೆ ಸಂತೋಷ ಉಂಟುಮಾಡಿದರೆ— ನೋಡಿದವರು ನಗಾಡಿದರೆ— ಅದೇ ನನ್ನ ಪ್ರತಿಫಲ. ಇದನ್ನು ನಿಮಗಿತ್ತ "ಒಂದಾಣೆ ಮಾಲೆ"ಯವರಿಗೆ ಎಂದಿನಂತೇ ವಂದನೆಗಳು.

ನ್ಯೂ ಇಂಗ್ಲೀಷ್ ಹೈಸ್ಕೂಲು,
ಭಟ್ಕಳ (ಉ. ಕ.)
ವಿಜಯದಶಮಿ, 1960.

ಸಜ್ಜನ ಸೇವಕ,
'ರಸಿಕ' ಪುತ್ತಿಗೆ.

ಮರೆವೂ ಮರೆವು
(ಒಂದು ದೃಶ್ಯದ ನಗೆ ನಾಟಿಕೆ)

ದೃಶ್ಯ ೧

[ಸುಬ್ಬಾ ಜೋಶಿಯವರ ಮನೆ. ಅವರು ಪಂಚಾಂಗ ಪಠಣ ಮಾಡು ತ್ತಿರುವರು: "ಅಚಿಂತ್ಯಾ ವ್ಯಕ್ತರೂಪಾಯ, ನಿರ್ಗುಣಾಯ, ಗುಣಾತ್ಮನೇ, ಸಮಸ್ತ ಜಗದಾಧಾರ, ಮುಹೂರ್ತಯೇ ಬ್ರಹ್ಮಣೇ ನಮಃ" ಪಂಚಾಂಗ ತೆಗೆದು] ಅದ್ಯಾ, ಅದ್ಯಾ, ಅದ್ಯಾ, ತಿಥಿ, ತಿಥಿ, ತಿಥಿ, ಪಠಣ, ಪಠಣ, ಪಠಣ, ಮಾರ್ತಾಂಡ, ಮಾರ್ತಾಂಡ, ಮಾರ್ತಾಂಡ, ಮಂಡಲ, ಮಂಡಲ, ವಿಕಾರೀ....

ಜೋಶಿ: ಹೌದೇನೇ? ಹೋಯತ್ ಇವ್ರೆ! ಇವತ್ತು ಏಕಾದಶಿ ಅಲ್ವೇನೆ? ....ಅಯ್ಯೋ ಕರ್ಮ! "ಏಕಾದಶಿ ಅಲ್ವೇನೆ" ಎಂತ ಇವಳನ್ನೇನ್ ಕೇಳೋದು? ಪಂಚಾಂಗ ಕೈಯಲ್ಲೇ ಇದೆ. ಹ್ಞಾಂ........ವಿಕಾರಿ, ವಿಕಾರಿ, ಶುಕ್ಲ ಪಕ್ಷ, ಶುಕ್ಲ....ಕಾಣ್ಸೋದೇ ಇಲ್ವಲ್ಲಾ! ಅಂದ ಹಾಗೆ ನನ್ನ ಕನ ಡಕ ಎಲ್ಲಿ? ಏಯತ್ ಇವ್ರೇಽಽ! ಏಯತ್ ಇವ್ರೇಽಽಽ! ಬಾರೇಽಽ! ನನ ಕನ್ನಡಕಾನೇ ಕಾಣ್ಸೋದಿಲ್ವಲ್ಲಾ? ಶಿವ್ಮ್ಯಾಽಽಽಽ ಏ ಶಿವ್ಮಾ ಽಽಽಽ! ದನಾ ಎಲ್ಲಾ ಬಿಟ್ಯೇನೋ?

(ಶಿವ್ಮನ ಪ್ರವೇಶ.)

ಶಿವ್ಮ: ಯಾಕೆ ಒಡ್ಯಾ, ಕರ್ದೀರಾ?

ಜೋಶಿ: ನಿನ್ನನ್ಯಾವ್ನೋ ಕರ್ದೋವ್ನು? ಕನ್ನಡಕಾ ಎಲ್ಲಿ ಎಂತ ಇವ ಳ್‌ನ್ ಕೇಳ್ದೆ. ಇವ್ರೇಽಽ! ಹೇ ಶಿವ್ಮ್ಯಾ, ಹೋಗಿ ಅವ್ಳನ್ ಕರಿಯೋ.

ಶಿವ್ಮ: ನಾನೇ ಒಡ್ಯಾ? ಒಳ್ಗ ಹೋಗ್ಲೇ?

ಜೋಶಿ: ಒಳಗ್ಯಾರು ಹೋಗೆಂದ್ರೋ? ಎಲ್ಲಿಯಾದರೂ ಹೋಗಿ ಹೊಂಡಕ್ಕೆ ಹಾರು!

ಶಿವ್ಮ: ನಾನೇ ಒಡ್ಯಾ? ಹೊಂಡ್ಕೆ ಹಾರ್ಲೇ? ಸರಿ ಒಡ್ಯಾ. (ಹೋಗುವನು. ನಾಗಮ್ಮನ ಪ್ರವೇಶ.)

ನಾಗಮ್ಮ: ಏನೂ ಅಂದ್ರಿ? ಆವಾಗಿಂದಾ ನೀವು ಯಾಕೆ ಕಿರಿಚುತ್ತಾ ಇದ್ದೀರಿ?

ಜೋಶಿ: ನಾನೆಲ್ಲೀ ಕಿಂಚಿದೆ? ಪಂಚಾಂಗ ಓದ್ತಾ ಇದ್ದೆ. ಕನ್ನಡಕ ಸಿಗೋದಿಲ್ಲಾ. ಆ ಶಿವ್ಯಾ ಎಲ್ಲಿ ಹೋದಾ? ಕರೆ ಅವನ್ನ.... ನನ್ನ ಕನ್ನಡಕ ಎಲ್ಲಿ ಹೋಯ್ತು?.... ಕರೆ ಅವನ್ನ!

ನಾಗವ್ವ: ಅಯ್ಯೋ ... ಅಯ್ಯೊ.... ಈ ನಿಮ್ಮ ಮರೆವು ಯಾವಾಗ ಬಿಟ್ಹೋಗುತ್ತೋ! ನಿಮ್ಮ ಗ್ರಾಚಾರ — ಹಣೇ ಮೇಲೆ ಇಟ್ಕೊಂಡು ಊರೆಲ್ಲಾ ತಿರುಗುತ್ತೀರಲ್ಲಾ? ನಿಮಗೇನ್ ಅನ್ನಲಿ!

ಜೋಶಿ: ನಾನು ಹುಡುಕುವದು ಪಂಚಾಂಗ. ಕನ್ನಡಕ ಅಲ್ವೇ ನಾನು ಹುಡುಕುತ್ತಿರೋದು! ಅದೆಲ್ಲಿ ಹಾಳಾಗ್ಹೋಯ್ತೋ ಏನೋ?

ನಾಗವ್ವ: ಇದೇನೂಂದ್ರೆ? ಕೈಯಲ್ಲೇ ಪಂಚಾಂಗ ಹಿಡ್ಕೊಂಡು, ಪಂಚಾಂಗ ಪಂಚಾಂಗ ಅಂತ ಬಡ್ಕೊಳ್ತೀರಲ್ಲಾ! ಇಕೊಳ್ಳಿ ಪಂಚಾಂಗ! ಇಕೊಳ್ಳಿ ಕನ್ನಡಕ! ಹಿಡಿರಿ, ತೆಗೆದುಕೊಳ್ಳಿ. (ತೆಗೆದು ಕೊಡುವಳು.)

ಜೋಶಿ: ಥೋ ಥೋ.... ಪಂಚಾಂಗ, ಕನ್ನಡಕ ಅಲ್ವೇ. ನಾನು ಹುಡ್ಕೋತಿರೋದು ಶಿವ್ಯಾನ್ನ. ಎಲೇ ಶಿವ್ಯಾ! (ಶಿವ್ಯಾನು ಬರುವನು.)

ಶಿವ್ಯಾ: ಓಽಽಽ. ಬಂದೆ ಒಡ್ಯಾ

ಜೋಶಿ: ಆ ಪಂಚಾಂಗ ತೆಗೆದುಕೊಂಡು ಎಲ್ಲಿ ಹಾಳಾಗ್ಹೋದ್ಯೋ?

ಶಿವ್ಯಾ: ಪಂಚಾಂಗ....? ನಾನು....? ಹಾಳಾಗಿ ಹೋದ್ದು?........ ನಂಗೊತ್ತಿಲ್ಲಾ ಒಡ್ಯಾ.... ನೀವು ಹೊಂಡಕ್ಹಾರು ಎಂದ್ರಿ. ನಾನು ಆ ಬಾಳೇ ಹಿತ್ಲಾಗೆ ಇರೋ ಹೊಂಡ್ದಾಗೆ ಕುಂತಿದ್ದೆ.

ನಾಗವ್ವ: ಸರಿಯಾದ ಯಜಮಾನ್ರು! ಸರಿಯಾದ ಆಳು! ಅಹಾ ಹಾಹಾ.... ಏನ್ ಜೋಡೀನೋ....! ಏನ್ ಜೋಡೀನೋ....!

ಶಿವ್ಯಾ: ಜೋಡಿ....? ನನ್ನೇನವ್ವಾ ಜೋಡಿ ಐತಿ? ಜೋಡಿ ಅಂದ್ರೆ ನಿಮ್ದು — ಒಳ್ಳೇ ಗಾಡಿಯೆತ್ತಿನ ಜೋಡಿ.

ನಾಗವ್ವ: ಲೋಽಽ. ಸಾಕೋ! ಹೋಗೋ! ತಲೆ ಹರಟೆ! ಆ ಎಮ್ಮೆಗಳನ್ನು ಹೊರಗೆ ಬಿಡು.

ಜೋಶಿ: ಏ, ಸಾಕೋ, ಹೋಗೋ ತಲೆಹರಟೆ! ಆ ಎಮ್ಮೆ ಹೊರಗೆ ಬಿಡು. ಎಲ್ಲಾ ಆ ಎಮ್ಮೆಗಳನ್ನು ಹೊಳೆಗೆ ಬಿಡು.

ಶಿವ್ಯಾ: ಒಡೆಯಾ? ಒಡೆಯಾ? ಏನಂದ್ರೀ....? ಹೊರಗಿನ ಎಮ್ಮೆಗಳನ್ನು ಬಿಡಲ್ಯಾ....?

ನಾಗಮ್ಮ: ಮನೆ ತೊಳಿತು. ಹೋಗೋ, ಹೋಗೋ (ಗಂಡ ನೊಡನೆ) ಏನೂಂದ್ರೆ.... ಈ ಹೊತ್ತು ಆ ರಾಮಾಚಾರಿ ಮನೆಯಲ್ಲಿ ಶ್ರಾದ್ಧ ಅಲ್ವೇ? ಬರ್ತೀನೆ ಅಂದಿದ್ರಲ್ಲಾ ನಿನ್ನೆ? ಹೋಗೋಲ್ವಾ? ಆಗ್ಲೇ ಗಂಟೆ ಹತ್ತಾಯ್ತು. ಇನ್ನೂ ಇಲ್ಲೆ ಎಮ್ಮ—ಪಂಚಾಂಗ—ಕನ್ನಡಕ—ತಿಮ್ಮ— ಎಂತ ಇದ್ದೀರಲ್ಲಾ?

ಜೋಶಿ: ಹಾಂ! ಹಾಂ! ಹೌದು. ನಿನ್ನೆ ರಾಮಾಚಾರಿ ಮನೇಲಿ ಶ್ರಾದ್ಧ. ನಾಳೆ ಬರ್ತೀನಿ ಎಂದಿದ್ದೆ. ಹೋಗ್ಲೇನೇ?

ನಾಗಮ್ಮ: ಇದೇನ್ ಕಣೀ ಕೇಳ್ತೀರಿ ನನ್ನತ್ರ? ಹೋಗ್ಲೇನೇ ಅಂತ? ನಾನ್ಹೋಗ್ತೀನಿ. ನಾನ್ಹೋಗಿ ಮಂತ್ರ ಹೇಳಿ ಬರ್ತೀನೆ.

ಜೋಶಿ: ನೀನ್ ಹೋಗ್ತಿಯಾ........? ಸರಿ, ಜೋಯಿಸರಿಗೆ ಮೈ ಚೆನ್ನಾಗಿಲ್ಲಾ ಅಂದ್ಬಿಡು. (ಮಲಗುವನು.) ನೀನೇ ಮಂತ್ರಾನ ಹೇಳ್ಬಿಡು. ದಕ್ಷಿಣೆ ಮಾತ್ರ ಕೇಳ್ಬೇಡಾ! ಅದಕ್ಕೆ ನಾನೇ ಬರ್ತೀನಿ.

(ಅಷ್ಟರಲ್ಲಿ ಯಾರೋ ಹೊರಗೆ ಕರೆಯುವರು. ತರಕಾರಿಯೊಡನೆ ಹಳ್ಳಿಯವನೊಬ್ಬನ ಪ್ರವೇಶ.)

ತುಕ್ರ: ಪಾದಾಕ್ ಬೀಳ್ತೀನಿ ಬುದ್ಧೀ.

ಜೋಶಿ: ಬೀಳ್ಬೇಡಾ! ಬೀಳ್ಬೇಡಾ. ಎದ್ದೇಳು, ಎದ್ದೇಳು! ನೋಡೇ, ಅವ ಬೀಳ್ತಾನಂತೆ. ಒಳಗೆ ಕರ್ಕೊಂಡ್ಹೋಗು.

ನಾಗಮ್ಮ: ಇದೇನೂಂದ್ರೆ? ಯಾವನೋ ಏನೋ ಕೇಳೋರ್ ಬಂದಾನಪ್ಪ. ನಮಸ್ಕಾರ ಮಾಡ್ತೀನೆ ಅಂದ್ರೆ ಒಳಗೆ ಕರ್ಕೊಂಡ್ಹೋಗು ಅಂತೀರಲ್ಲಾ! ಅವನೇನ್ ಮನೆ ಅಳಿಯನೇ?

ಜೋಶಿ: ಹಾಂ. ಅಂದಹಾಗೆ ನಮ್ಮಳಿಯ ಗೋವಿಂದರಾಯ ಅಲ್ಲ ಇವ! ಹಾಂ ಏನೋ? ಯಾರ್ ಬಂದ್ಯೋ? (ವಿಚಾರ ಮಾಡುವನು.)

ತುಕ್ರ: ಬುದ್ಧೀ, ಅದೇನ್ ಹೇಳ್ಲಿ ಬುದ್ಧಿ? ಒಂದೇ ಕೂಸು. ಭಾಳಾ ಪಿರೀತಿ ಮಾಡಿ ಸಾಕ್ದೆ. ಬಾಳೇ ಗಿಡದ್ಹಾಂಗೆ ಸಾಕ್ದೆ. ಕೆಳಗಿಟ್ರೆ ಇರ್ವೆ ಕಚ್ಕೊಂಡ್ಹೋದೀತು—ಮೇಲಿಟ್ರೆ ಕಾಗೆ ಹೊತ್ಕೊಂಡು ಹೋದೀತು ಅಂತಾ ಕಣ್ಣಾಗೇ ಇಟ್ಕೊಂಡ್ ಸಾಕ್ದೆ ಬುದ್ಧೀ! (ತಿಮ್ಮನ ಪ್ರವೇಶ)

ತಿಮ್ಮ: ಕಣ್ಣಾಗೇ ಇಟ್ಕೊಂಡು ಸಾಕ್ವೇನೋ? ಅದ್ಯಾಗೆ ಸಾಕ್ತ್ಯಾ?

ಜೋಶಿ: ಲೇ ತಿಮ್ಮಾ, ಎಮ್ಮ ಬಿಟ್ಟೆನೋ........? ನಿನ್‌ಗ್ಯಾಕೋ ಅದೆಲ್ಲಾ? (ಬಂದವನನ್ನು ನೋಡಿ ಹೇಳುವನು.) ಏನಾಯ್ತು ಹೇಳು!

ಶುಕ್ರ: ಸಾಕಿದನಾ ಬುದ್ಧೀ........ಸಾಕ್ದ. ಮೊನ್ನೆ ಅಮಾಸೆ ದಿನ ಕತ್ಲಾಗೆ ಹೊರಗ್ ಹೋಗ್ಬೇಡಾ, ಹೋಗ್ ಬೇಡಾ ಎಂದೆ. ಅಯ್ಯೋಽಽಽಽ

ಜೋಶಿ: ಏ ಬೆಪ್ಪೇ. ಯಾರು ಸತ್ರೋ ಅಳೋಕೆ?

ನಾಗಮ್ಮ: ಶಿವಮ್ಮ! ನೀನು ಆ ತರಕಾರಿ ತಕೊಂಡು ಒಳಗಿಡೋ.

ಶಿವ್ಮ: ತರ್ಕಾರಿ ತಗೊಂಡ್ಹೋಗಿ ಮಾರಿ ಬರ್ಲೇ? ಮಾರಿದ್ರೆ ಎಂಟಾಣೆ ಸಿಕ್ಕೀತು. ಮಾರ್ಲೇ ಅಮ್ಮಾಽಽ?

ನಾಗಮ್ಮ: ಹೇ! ಏನೋ ಮಾರೋದು? ನಿನ್ನ ಹಣೇಬರಹ! ತಕೊಂಡ್ಹೋಗಿ ಒಳ್ಗಿಡು. (ಗದರಿಸುವಳು)

ಶುಕ್ರ: ಹೊಡೀಬೇಡಿ ಅಮ್ಮಾ, ಹೊಡಿಬೇಡಿ.

ಶಿವ್ಮ: ಏಯ್! ನೀನು ಸುಮ್ನಿರೋ. ಹೊಡ್ದ್ರೆ ನಮ್ಮಮ್ಮ ಹೊಡೀತಾರೆ. ನಿಂಗ್ಯಾಕೋ ಅದೆಲ್ಲಾ? ಏನ್ ಹೇಳ್ತಿಯೋ ಅಳು! (ತರಕಾರಿ ತೆಗೆದುಕೊಂಡು ಒಳಗಿಡುವನು.)

ಜೋಶಿ: ಅಯ್ಯೋ ಕರ್ಮವೇ? ಏ, ಅದೇನಾಯ್ತು ನಿನ್ ಕೂಸು? ಅಮಾಸೇ ದಿನಾ....ಅದೇನು ಹೇಳೋ

ಶುಕ್ರ: ಅಮಾಸೇ ದಿನ. ಹೋಗ್ಬೇಡಾ, ಹೋಗ್ಬೇಡಾ ಅಂದೆ ಬುದ್ಧಿ.

ಜೋಶಿ: ಎಲ್ಲಿಗೋ? ಯಾರನ್ನೋ?

ಶುಕ್ರ: ಅದೇ ಬುದ್ಧೀ. ನನ್ ಕೂಸು.

ಜೋಶಿ: ಯಾವ್ ಕೂಸೋ?

ಶುಕ್ರ: ಅದೇ ಬುದ್ಧೀ. ಒಂದೇ ಒಂದ್ ಕೂಸು. ಕೆಳಗಿಟ್ರೆ ಇರ್ವೆ ಕಚ್ಕೊಂಡ್ಹೋದೀತು—ಮೇಲಿಟ್ರೆ ಕಾಗೆ ಎತ್ಕೊಂಡ್ಹೋದೀತು—ಎಂತಾ ಕಣ್ಣಾಗೇ ಇಟ್ಕೊಂಡು ಸಾಕಿದೆ ಬುದ್ಧೀ.

ನಾಗಮ್ಮ: ಅದೆಲ್ಲಾ ಹೇಳಿ ಆಯ್ತು ಅಲ್ವೇನೋ? ಅದಕ್ಕೇನಾಯ್ತು? ನೀನ್ಯಾಕ್ ಬಂದೆ? ಈಗೇನಾಗ್ಬೇಕು? ಅಂತ ಹೇಳಲ್ಲ.

ಜೋಶಿ: ಅದನ್ನೇ ಹೇಳಲ್ಲ. ಹ್ಞಾಂ!

ಶುಕ್ರ: ಮೂರು ದಿನಾಗಿಂದಾ ಒಂದೇಸಮ್ನೆ ಜರಾ ಬುದ್ಧೀ. ನೆಲ್ದ ಮಲಗಿದ್ರೆ ಎಗರಿ ಎಗರಿ ಎಗರಿ ಬೀಳ್ತಾದೆ. 'ಯಮ್ಮಾ, ಯಪ್ಪಾ' ಎಂದ್ ಬಡ್ಕೊಳ್ತಾದ್ ಬುದ್ಧಿ.

ಜೋಶಿ: ಎಗರೀ ಎಗರೀ ಬಡ್ಕೊಳ್ತದೆ? ಹೆನೀ ತಿಳೀತ್ ತಿಳೀತ್! ನಾಗೂ, ಏ ನಾಗೂ....? (ಆಚೀಚೆ ನೋಡುವನು).

ನಾಗಮ್ಮ: ಇಲ್ಲ! ಇದ್ದೇನಲ್ಲಾ! ಯಾಕೆ ಕರೀತೀರಿ?

ಜೋಶಿ: ಸಿಟ್ಟಾಗ್ಬೇಡಾ ಕಣೇ. ನೀನ್ ಒಳ್ಗೆ ಹೋದ್ಯೋ ಅಂತ ಕರ್‍ದ್ರೆ.

ನಾಗಮ್ಮ: ಅದೇನ್ಹೇಳಿ.

ಜೋಶಿ: ಎಲ್ಲಿ? ನನ್ ಕವ್ಡೆ ಚೀಲಾ ತಗೋಬಾ.

ಶುಕ್ರ: ಹೂಂ, ಬುದ್ಧಿ, ಚೌಡೀದೇ ಉಪದ್ರ ಅದಕ್ಕೆ. ಕವ್ಡಿ ಚೀಲಾನೇ ಬೇಕು. ನಮ್ಮನೇ ಮುಂದೆ ಒಂದು ದೋಡ್ಡ್ ಚವಡೀ ಕಲ್ ಐತೆ ಬುದ್ಧೀ. ಅದ್ರ ತಾವಾಗೇ ಹೋಗಿ ಆಡ್ತಾ ಇತ್ ಬುದ್ಧೀ.

(ನಾಗಮ್ಮ ಕವ್ಡೆ ಚೀಲದೊಂದಿಗೆ ಪ್ರವೇಶ)

ನಾಗಮ್ಮ: ಹೂಂ, ತಗೊಳ್ಳಿ ಕವ್ಡೇ ಚೀಲ. ಅವ್ನಿಗೆ ಬೇಗ ಹೇಳಿ ಮುಗ್ಸಿ, ರಾಮಾಚಾರಿ ಮನೆಗೆ ಶ್ರಾದ್ಧಕ್ಕೆ ಹೋಗಿ.

ಜೋಶಿ: ಹೋ, ಮರ್‍ತೇ ಹೋಯ್ತಲ್ಲೇ ರಾಮಾಚಾರಿ ಮನೆ ಶ್ರಾದ್ಧ! ಹೊರಟೆ, ಹೊರಟೆ! (ಎದ್ದು ಹೊರಡಲು ಅನುವಾಗುವನು).

ಶುಕ್ರ: ಬುದ್ಧೀ, ಬುದ್ಧಿ! ನನ್ ಕೂಸು? ಚವಡಿ—ಏನಾದ್ರೂ ಮಾಡಿ ಬುದ್ಧೀ!

ನಾಗಮ್ಮ: ಏನೂಂದ್ರೆ ಪಾಪ, ಹಳ್ಳೀಂದ ಬಂದಿದ್ದಾನೆ ತರಕಾರಿ ಬೇರೆ ತಂದಿದ್ದಾನೆ ಅವ್ನಿಗೆ ಏನಾದ್ರೂ ಹೇಳಿ ಕಳಿಸಬಾರ್‍ದೇ?

ಜೋಶಿ: ಹೂಂ, ಹೌದು, ಹೌದು. ಎಲ್ಲಿ ಆ ಮಣೆ ತೆಗೊಂಡ್ ಬಾ.

(ನಾಗಮ್ಮ ಒಳಗೆ ಹೋಗುವಳು).

ಜೋಶಿ: ಅಲ್ಲೋ, ಚವಡಿಯೆಂದೆಯಲ್ಲಾ ಎಲ್ಲಿದೋ? ನಿನ್ ಮಗೂ ಏನ್ಮಾಡ್ತು? ಯಾವಾಗ್ನಿಂದ?

ಶುಕ್ರ: ಅಮಾಸೇ ದಿನ ಹೋಗ್ಬೇಡಾ, ಹೋಗ್ಬೇಡಾ—ಅಂದೆ ಬುದ್ದೀ. ನನ್ ಮಾತೇ ಕೇಳ್ಲಿಲ್ಲಾ. ಮೂರ್ ದಿವ್ಸಾದಿಂದಾ ಜರಾ ಬರ್‍ತೈತಿ ಬುದ್ಧೀ ಹಾರ್‍ದ್ಹಾರಿ, ಹಾರ್‍ದ್ಹಾರಿ ಬೀಳ್ತದೆ.

ಜೋಶಿ: ಹಾಂ, ಹಾಂ, ಗೊತ್ತಾಯ್ತು! ಗೊತ್ತಾಯ್ತು!

(ಮಣೆಯೊಂದಿಗೆ ನಾಗಮ್ಮನ ಪ್ರವೇಶ. ಜೋಶಿಯು ಮಣೆಯ ಮೇಲೆ ಕವಡೆಗಳನ್ನು ಮೇಷ, ವೃಷಭ ಎಂದು ಲೆಕ್ಕ ಮಾಡುತ್ತ 12 ಸಾಲಾಗಿ ಇಡುವನು. ಕೈ ಮುಗಿದು ಕುಳಿತು, "ಮಂಗಲ ಭಗವಾನ್ ವಿಷ್ಣು, ಮಂಗಲಂ ಗರುಡಧ್ವಜ, ಮಂಗಲಂ ಮಧುಸೂದನಾ, ಮಂಗಲಂ ದೇವಕೀ ಪುತ್ರ, ಮಂಗಲಂ ಗರುಡಧ್ವಜ....")

ಜೋಶಿ: ಹಾಂ, ಕಾಣಿಕೆ ಇಡೋ! ನಿನ್ ದೇವ್ರನೆಲ್ಲಾ ಸ್ಮರಿಸಿಕೋ ಭೂತಗಳನ್ನು ನೆನೆಸಿಕೋ.

(ಶುಕ್ರನು ನಿಧಾನವಾಗಿ ಹೆಗಲಿನ ಶಾಲಿನ 4—6 ಗಂಟು ಬಿಚ್ಚಿ ಒಳಗಡೆ ಇರುವ ನಾಲ್ಕು ಅಣೆ ಪಾವಲಿ ತೆಗೆದು ಕೈಮುಗಿದು ನಿಂತು....)

ಶುಕ್ರ: ಸ್ವಾಮಿ ದೇವ್ರೇ, ಹನುಮಾನ್ ದೇವ್ರೇ, ರಾಮರ್ ದೇವ್ರೇ, ನಾರಾಯಣ್ ದೇವ್ರೇ, ತಿರ್ಪತಿ ದೇವ್ರೇ, ಬೊಬ್ಬರಿಯಾ, ಕಲ್‌ರುಟ್ಟಿ, ಪಂಜುರ್ಲಿ, ಜಟ್ಕಾ, ಮಾಸ್ತಿ ಅಮ್ಮಾ. ಅಯಮ್ಮಾ, ಈಯಮ್ಮಾ, ಮಾರಮ್ಮಾ, ನಮ್ಮಮ್ಮಾ ನಮ್ಮ ಎಲ್ಲಾ ಗ್ರಾಚಾರ್‌ಗಳು ಕಂಡ್‌ಬರ್ಲಿ, ಕಂಡ್ ಬರ್ಲಿ (ನಮಸ್ಕರಿಸುವನು. ಕಾಣಿಕೆ ಇಟ್ಟು ಕೈಮುಗಿಯುವನು)

ಜೋಶಿ: (ಕವಡೆ ರಾಶಿಯ ಮೇಲೆ ಕೈಯಾಡಿಸುತ್ತಾ) ಮೇಷ, ವೃಷಭಾ, ಮಿಥುನ....(ಬೆರಳೆಣಿಸುವನು. ಒಂದು ಹಿಡಿ ತೆಗೆದಿಡುವನು. ಅದನ್ನು ಎಣಿಸುವನು.) ಹಾಂ, ನಿನ್ ಹೆಸ್ರೇನೋ?

ಶುಕ್ರ: ಶುಕ್ರಯ್ಯ ಗದ್ದೇ ಹೊಂಡಾ ಬುದ್ದೀ.

ಜೋಶಿ: ಗದ್ದೇ ಹೊಂಡ್ದಾಗೆ ಬಿದ್ದೀ?

ನಾಗಮ್ಮ: ಇದು ಇಡೀ ದಿನ. ಆಗೋದಿಲ್ಲಾ. ಇವ್ರ ಹೊಟ್ಟೇಗೆ ಹಾಕ್ಲಿಕ್ಕೆ ಏನಾದ್ರೂ ನೋಡ್ತೇನೆ. (ಒಳಗೆ ಹೋಗುವಳು)

ಶುಕ್ರ: ಅಲ್ಲಾ ಬುದ್ದೀ, ಗದ್ದೇ ಹೊಂಡಾ ಅಂತ ಅಡ್ಡ ಹೆಸ್ರು.

ಜೋಶಿ: ನಿಮ್ಮ ಅಪ್ಪನ ಹೆಸ್ರು?

ಶುಕ್ರ: ಪಕ್ರಯ್ಯ ಗದ್ದೀ ಹೊಂಡಾ ಅಂತ

ಜೋಶಿ: ನಿನ್ ರಾಶಿ ಗೊತ್ತಿದ್ಯೇನೋ?

ಶುಕ್ರ: ಗೊತ್ತಿಲ್ಲಾ ಬುದ್ದೀ, ಗೊತ್ತಿಲ್ಲಾ.

ಜೋಶಿ: ಹೋಗಲಿ ಬಿಡು. (ಬೆರಳುಗಳನ್ನೆಣಿಸುವನು.) ನಿಮ್ಮನೇ ಮುಂದೆ ಒಂದು ಚೌಡೀ ಕಲ್ಲದ್ಯಾ? ಮೊನ್ನೇ ಅಮಾಶೇ ದಿನಾ ನಿನ್ ಮಗು ಅಲ್ಲಿ ಹೋಯ್ತಾ?

ಶುಕ್ರ: ಹೂಂ, ಬುದ್ದೀ! ಹೂಂ! ನೀವ್ ಹೇಳಿದ್ದೆಲ್ಲಾ ನಿಜ!

ಜೋಶಿ: ಹಾಂ ಮತ್ತೆ! ಅದೆಲ್ಲಾ ಈ ರಾಶಿಯಲ್ಲೇ ಗೊತ್ತಾಗುತ್ತೆ. ನಿನ್ ಮಗೂಗೆ ಮೂರ್ ದಿವ್ಸದಿಂದ ಜರಾ ಬರ್ತಾ ಎಗರಿ ಎಗರಿ ಬೀಳ್ತದಾ? ಯಾಮ್ಮಾ ಯಪ್ಪಾ ಅಂತಾದಾ?

ಶುಕ್ರ: ಹೂಂ ಬುದ್ಧೀ, ಹೂಂ! ನೀವ್ ಹೇಳಿದ್ದೆಲ್ಲಾ ಸತ್ಯಾ.

ಜೋಶಿ: ಹಾಂ, ಮತ್ತೆ! ಅದೆಲ್ಲಾ ಈ ಕವ್ಡೆಯೊಳ್ಗೆ ಗೊತ್ತಾಗುತ್ತೆ. ನೋಡು, ನೀನು ನಾಳೆ ಸೋಮವಾರ ದಿನ__

ಶುಕ್ರ: ನಾಳೆ ಸೋಮವಾರ ಅಲ್ಲಾ ಬುದ್ಧೀ— ಶನಿಯಾರಾ!

ಜೋಶಿ: ಸೋಮವಾರ್ ಅಲ್ಲದ್ರೆ ಮುಂದಿನ ಸೋಮವಾರಾ ಮನೇ ಮುಂದಿನ್ ತೆಂಗೀನ್ ಮರ್ದ ತೆಂಕ್ ದಿಕ್ಕಿನ ಗೊನೆಯಿಂದ ಮೂರು ತೆಂಗಿನ ಕಾಯಿ ಮಧ್ಯರಾತ್ರೆ ತಗೊಂಡ್ಬಂದ್ಬಿಡು. ಹಂಗೇ ಒಂದು ಐದು ರೂಪ್ಯಾ ಒಂದು ಸ್ವಲ್ಪ ತರ್ಕಾರಿ, ಒಂದು ಮಾನಗಿ ಅಕ್ಕಿನೂ ತಗೊಂಡ್ಬಂದ್ಬಿಡು. ಎಲ್ಲಾ ಉಸಾರ್ ಮಾಡ್ತೀನಿ.

ಶುಕ್ರ: ಆಗ್ಲಿ ಬುದ್ಧೀ, ಎಲ್ಲಾ ನಿಮ್ಮ್ ದಯೆ.

ಜೋಶಿ: ಈಗ್ ನೀನ್ ಹೋಗು.

(ಒಬ್ಬ ಬ್ಯಾರಿ ಬರುವನು).

ಶಿವಮ್ಮ: ಬನ್ನಿ, ಬನ್ನಿ, ಬನ್ನಿ, ಇವ್ರೇ ನಮ್ಮ್ ಯಜಮಾನ್ರು. ಒಡ್ಯಾ, ಇವ್ರು ಕುಂದಾಪುರದ ಬ್ಯಾರಿಗಳು. ಒಣಕಲ್ ಎತ್ತಿನ್ ವ್ಯಾಪಾರಕ್ಕೆ ಬಂದಾರೆ.

ಬ್ಯಾರಿ: ಹೂಂ, ಹೌದು. ನಮ್ದಾಕೇ ಎತ್ತಿದೂ ಚರ್ಮದ ಯಾಪಾರ. ಹಳೇ ಕೋಣಾನೂ ಆಗತ್ತೆ. ಒಣಕಲ್ ಎಮ್ಮೆನೂ ಆಗತ್ತೆ. ಸತ್ತ ಕರೂನೂ ಪರವಾ ಇಲ್ಲಾ. ನಮ್ದು ಎಲ್ಲಾ ತಗೊಂಡ್ಬಿಡ್ತಾನೆ. ಪೈಸಾ ನಗದ್ ಕೊಡ್ತಾದೆ. ಇದ್ದಾವೆ?

ಜೋಶಿ: ಇದೇನೋ ಗ್ರಹಾಚಾರ? ಏ ಶಿವಮ್ಮಾ, ಇವನೆಲ್ಲೋ ಗಂಟ್ಬಿದ್ದಾ ನಿನಗೇ? ಕಸಾಯಿ.........ಗಂಡ! ಹೊರಗೆ ಕಳ್ಸೋ ಇವನನ್ನ! ಶಾಂತಂ ಪಾಪಂ, ಶಾಂತಂ ಪಾಪಂ! ಏ ಬ್ಯಾರಿ, ನಡೆಯೋ ಹೊರಗೆ! ನಮ್ಮಲ್ಲಿ ಕನ್ನಡಕಾನೂ ಇಲ್ಲ ಪಂಚಾಂಗಾನೂ ಇಲ್ಲಾ. ಅಲ್ಲಾ ಅಲ್ಲಾ ಎಮ್ಮೆನೂ ಇಲ್ಲಾ ಕೋಣಾನೂ ಇಲ್ಲಾ.

ಬ್ಯಾರಿ: ಬರಡು ಎಮ್ಮೆ—ಅಲ್ಲಾ ದನ....?

ಶಿವಮ್ಮ: ಬೇರಿಗಳೇ, ಬನ್ನಿ. ಕೊಟ್ಟಿಗೆಯಲ್ಲಿರುವ ಕೋಡು ಮುರಿದ ಬಾಡು ಎಮ್ಮೆಯನ್ನು ನೋಡಿ ಬರೋಣ. ಅಲ್ಲದಿದ್ದರೆ ಕಾಲ್ಮುರಿದ ಕರಿ ಕರುವನ್ನು ನೋಡಿ ಬರೋಣ. ಬನ್ನಿ.

ಜೋಶಿ: ಏ ಶಿವಮ್ಮಾ! ಎಮ್ಮೆಗಳನ್ನೆಲ್ಲಾ ಹೊರಗೆ ಹೊಡಿ ಅಂದೆ ನಲ್ಲೋ! ಇವನಿಗ್ಯಾಕೆ ಆಚಾರ್ರ ಮನೆ ಶ್ರಾದ್ಧಾಕ ಕರೀತಾ ಇದ್ದೀ?

ಶಿವಮ್ಮ: ಆಚಾರ ಮನೆ....ಶ್ರಾದ್ಧ....ಯಾವ ಆಚಾರಿ....? ಯಾವ ಶ್ರಾದ್ಧಾ....? ಹಾಂಗಾದಿ ನಾನೂ ಬರ್ತೀನಿ. ಒಳ್ಳೇ ಪಾಯ್ಸ, ಕೋಸಂಬರಿ, ಪತ್ರವಡೆ, ಕೊಟ್ಟೆ, ವಡೇ ಎಲ್ಲಾ ಇರ್ತದೆ. ಹಾಂ, ಬೇಗಿಗಳೇ, ನೀವು ಹೋಗಿರಿ! ನಮ್ಮಲ್ಲಿ ಬೋರಿ ಇಲ್ಲಾ, ಹೋರಿ ಇಲ್ಲಾ, ಕೋಣಾನೂ ಇಲ್ಲಾ.

ಬ್ಯಾರಿ: ಅರೇ ಶಿವಮ್ಮಣ್ಣಾ, ನೀನು ಆಗ ಹೇಳಿದ್ದಾನೆ, ಜೋಶೀದು ಮನೆ' ಕೋಣಾ ಇದ್ದಾರೆ ಅಂತ ಈಗ ಹೇಳ್ತಾದೆ ಇಲ್ಲಾ ಅಂತ ಶಿವಮ್ಮಣ್ಣಾ ನಿವಗ್ಹಾಕಿ 5 ರೂಪ್ಯಾ ಇನಾಮು ಕೊಡ್ತಾರೆ. ಎರಡು ಕೋಣಾ ಕೊಡಿಸು. ಬಸ್. ಅಷ್ಟು ಮಾಡು.

ಶಿವಮ್ಮ: ಒಡೆಯ, ನಮ್ಮ ಹಟ್ಟಿಯಲ್ಲಿರೋ ಆ ಹಳೇ ಕೋಣಾ ಮೊನ್ನೆ ಕೋಡ್ಮುರ್ಕೊಂಡಿತಲ್ಲಾ? ಮತ್ತು ಆ ಮುದೀ ಎತ್ತು ಬಾಲಾ ಮುರ್ಕೊಂಡಿತಲ್ಲಾ? ಅದನ್ನು ಕೊಡ್ತೀರದೇ? ಅದು ಸತ್ತಾದರೂ ಸಾಯದು. ಬದುಕೀನೂ ಇರದು. ಅದ್ಯಾಕೆ ಮತ್ತೆ ಹಟ್ಟಿಗೆ ಭಾರಾ, ಹುಲ್ಲಿಗ್ ದಂಡ?

ಜೋಶಿ: ಎತ್ತನ್ನು ಕೊಟ್ಟರೆ ಶ್ರಾದ್ಧಕ್ಕೆ ಹೋಗುದ್ಬೇಡ್ವೇನೋ? ಅಲ್ಲ ಮಂತ್ರದ ಪುಸ್ತಕ ಓದುದ್ಬೇಡ್ವೇನೋ? ಇರೋದು ಒಂದೇ ಕನ್ನಡಕ. ಅದನ್ನೇ ಬ್ಯಾರಿಗೆ ಕೊಟ್ಟರೆ ನಾನೇನು ಮಾಡಲಿ? ಅಲ್ವೇ ಠ ಠ ಠ. ಇವಳೇ ಠ ಠ ಠ ಏ ಇವಳೇ ಠ ಠ ಠ ನಾಗೂ ಇಲ್ಲ್ಬರೇ ಠ ಠ ಠ. ಈ ಬ್ಯಾರಿಗೆ ಪಂಚಾಂಗ ಬೇಕಂತಲೇ! ಕೊಡೂದೇನೇ?

ಶಿವಮ್ಮ: ಪಂಚಾಂಗಲ್ವೊಡೆಯಾ. ಕೋಡ್ಮುರಿದ ಕೋಣ. ಬಾಲ್ಮುರಿದ ಎತ್ತು.

(ನಾಗಮ್ಮನ ಪ್ರವೇಶ.)

ನಾಗಮ್ಮ: ಇದೇನು ಇದು ಶಿಂವಾ? ಎತ್ತು ಕೋಣಾಂತ ಇಲ್ಲೇ ನಿಂತಿದ್ಯಲ್ಲೇ! ಬಚ್ಚಲ್ಮನೆ ನೀರು ಹಾಕಂತ ಹೇಳಿದ್ನಲ್ಲಾ? ಹಾಕಿದ್ಯೇನೋ?

ಶಿವಮ್ಮ: ಓ! ಆಗ್ಲೇ ಹಾಕಿದ್ನಲ್ಲಾ. ಎರಡು ಕೊಡ ನೀರು ತಕ್ಕೊಂಡ್ಹೋಗಿ ಆ ಧಗಧಗಾಂತ ಉರಿಯುತ್ತಿರುವ ಒಲೆಗೆ ಪಚಾಕ್ ಎಂತ ಹಾಕ್ದೆ.

ಜೋಶಿ: ಯಾವುದನ್ನೋ? ನಾನು ಪಂಚಾಂಗ ಸುಟ್ಟು ಹಾಕಿ

ದೆಸೋ? ನಾಗೂ, ಇದೇನೆ ಅವಾಂತರ? ನನ್ನ ಪಂಚಾಂಗ ಸುಟ್ಟು ಬಿಟ್ಟೆಯಲ್ಲೇ?

ನಾಗ:: ಅಯ್ಯೋ! ಅಯ್ಯೋ! ನಿಮ್ಮ ಪಂಚಾಂಗ. ನಿಮ್ಮ ಪಂಚಾಂಗ. ಯಾರ್ರೀ ಸುಡ್ಸಿದವ್ರು? ಅವ್ನೇ ಬೆಪ್ಪ. ಬಚ್ಚಲ್ಮನೆ ನೀರು ಹಾಕು ಎಂದ್ರೆ ಒಲೆಗೆ ನೀರು ಹಾಕಿದ್ದಾನೆ. ನಿಮ್ಗೆ ಪಂಚಾಂಗದ ಹುಚ್ಚು. ಅಂತೂ ರಾಮಾಚಾರಿಗೆ ಶ್ರಾದ್ಧ ಆತು. ಏ ಬ್ಯಾರೀ, ನೀನ್ಯಾಕೆ ನಿಂತಿದ್ಯೋ? ಏ ತಿಂಮಾ, ಇವನ್ನ್ಯಾಕೆ ಕರ್ಕ್ಯೋ ಬಂದ್ಯೋ? ಪಾಪಿ. ಚಾಂಡಾಲ. ಮೋರಾ ನೋಡಿದ್ರೆ ಮೂರ್ಸಲ ಮೀಯ್ಬೇಕು.

ಬ್ಯಾರಿ: ಅಮ್ಮಾ, ನಮ್ದೂ ಎಮ್ಮೆ ಕೋಣದ್ ವ್ಯಾಪಾರಕ್ಕೆ ಬಂದಿದ್ದಾರೆ. ನಮ್ಗೆ ಮೀಸ್ ಬ್ಯಾಡಿ. ಅಮ್ಮಣ್ಣಾ ಏನ್ ಪಾ? ಕೋಣಾ ಸಿಗ್ತಾನೇ ಇಲ್ಲಾ? ಹೇಳ್ಬಿಡು. ನಾನು ಹೋಗ್ತದೆ. ಇನ್ನೆಲ್ಲಾದ್ರೂ ಬೇರೆ ಹುಡುಕುತ್ತಾರೆ. ಇನ್ನೆಲ್ಯಾದ್ರೂ ಉಂಟಾ ನೋಡ್ತಾರೆ. (ಸಭೆ ನೋಡಿ) ನಿಮ್ಮಲ್ಲಿ ಯಾರಾದ್ರೂ ಹಳೇ ಎಮ್ಮೆ, ಮುದಿಕೋಣ, ಕಾಲ್ ಮುರಿದ ಎತ್ತು, ಕುಂಟಕಾಲ ಕೋಣ ಇದ್ದಾರಾ? ಇದ್ದಾರೆ ಆದರೆ ನಾವು ತೆಕ್ಕೊಳ್ತಾಡೆ.

ತಿಮ್ಮ: ಬೇರಿಗಳೇ, ನೀವು ಈಗ ಹೋಗಿ ಆ ಮೇಲೆ (ಕಿವಿಯಲ್ಲಿ ಪಿಸುಗುಟ್ಟುವನು.) ಅಂ ಕ ಕ. ಗೊತ್ತಾಯ್ತಲ್ಲಾ? ಆ ಮೇಲೆ!

ಬ್ಯಾರಿ: ಗೊತ್ತಾಗಿದ್ದಾನೆ. ಗೊತ್ತಾಗಿದ್ದಾನೆ. ನಮ್ದು ಬರ್ತಾದೆ.

ನಾಗು: ಏ ತಿಂಮ. ಆಚೆ ಮನೆ ಹೋಗಿ ಸತ್ಯಮ್ಮನ ಕರ್ಕ್ಯೋಂ ಬಾರೋ.

ತಿಮ್ಮ: ಸತ್ಯಮ್ಮ ನನ್ನ ಕರ್ಕ್ಯೊಂಬಾ ಅಂತಂದ್ರಾ? ಅವ್ರು ಇರ್ತಾರೋ ಇಲ್ವೋ?

ನಾಗು: ಇದ್ದಾರೆ ಕಣೋ. ಹೋಗು. ನಾ ಬರ್ಲಿಕ್ಕೆ ಹೇಳಿದ್ದೇನಂತ ಹೇಳು.

ತಿಮ್ಮ: (ಸ್ವಲ್ಪ ದೂರ ಹೋಗಿ ಹಿಂತಿರುಗುವನು.) ಅಂ ಕ ಕ. ಮತ್ತೇ............ಅವ್ರು............ಬರ್ತಾರೋ ಇಲ್ವೋ ಕ............

ನಾಗಮ್ಮ: ಬರ್ತಾರೆ ಕಣೋ. ನಾಗಮ್ಮನವರು ಕರೀತಾರೆ ಅನ್ನು.

ತಿಮ್ಮ: (ಸ್ವಲ್ಪ ದೂರ ಹೋಗಿ ತಿರುಗುವನು.) ನಾನು ಅಲ್ಲೀ ತನಕ ಹೋಗ್ತೀನೋ ಇಲ್ವೋ.

ಜೋಶಿ: ಅದನ್ನು ಬೇಕಾದ್ರೆ ನಾ ಹೇಳ್ತೇನೆ. ಇವ್ನೇ ಹಾಗೆ ಆ ಪಂಚಾಂಗ, ಕವ್ಡೆ ಚೀಲ ತಗೊಂಡು ಬಾ.

ನಾಗಮ್ಮ: ಅಯ್ಯೋ. ಅಯ್ಯೋ. ಹೇ ಕತ್ತೇ. ಹೋಗು ಅಂದ್ರೆ ಹೋಗ್ತನೋ ಇಲ್ಲೋ ಎನ್ನುತ್ತ ತಬ್ಬೇರಾಯ ನಿಂತ್ಹಾಂಗೆ ನಿಂತಾನೆ. ಹೋಗೋ.

ತಿಮ್ಮ: ಹೋಗ್ತೇನವ್ವಾ (ಹೋಗುವನು.)

ಜೋಶಿ: ನಾಗೂ, ಇಲ್ಲಿ ಬಾರೇ. ಇಲ್ಲಿ ಬಾರೇ.

ನಾಗಮ್ಮ: ಇದೇನೊಂದ್ರಿ? ಇದೇನಾಗಿದೆ ನಿಮ್ಗೀವತ್ತು? ಏಳಿ ನೋಡೋಣ. ಶ್ರಾದ್ಧಕ್ಕೆ ಹೋಗಿ. ರಾಮಾಚಾರಿ ಕಾಯ್ತಾನೋ ಏನೋ? ಹೂಂ ಏಳಿ. ಏಳಿ.

ಜೋಶಿ: ತಡೀಯೆ. ನನ್ನ ಪಂಚಾಂಗ ಎಲ್ಲಿ?

ನಾಗಮ್ಮ: ಅಯ್ಯೋ ನನ್ನ ಖರ್ಮ! ಇಗೊಳ್ಳಿ ನಿಮ್ಮ ಪಂಚಾಂಗ ಏಳಿ. (ಅಷ್ಟರಲ್ಲಿ ಹೊರಗೆ ಕರೆಯುವ ಸದ್ದು.)

ಪೋಸ್ಟ್‌ಮೆನ್: ಜೋಯಿಸರೇ, ನಿಮಗೊಂದು ಟೆಲಿಗ್ರಾಂ ಇದೆ.

ಜೋಶಿ: (ಎದ್ದು ಹೋಗಿ) ಟೆಲಿಗ್ರಾಮಾ ಽ ಽ ಽ ಽ ? ಅದ್ಯಾವದು? ನಾಗೂ, ನನ್ನ ಪಂಚಾಂಗ ತಗೋ ಬಾರೆ. ಅದ್ಯಾವ ನಕ್ಷತ್ರದಲ್ಲಿ ಇದೆ?

ಪೋ: ನಕ್ಷತ್ರಲ್ಲ ರಾಯರೇ! ಟೆಲಿಗ್ರಾಂ. ಟೆಲಿಗ್ರಾಂ ಅಂದರೆ ತಂತಿ.

ಜೋಶಿ: ಅಯ್ಯೋ, ತಂತಿಯಾ? (ಬೀಳುವನು.) ಹೋದನಲ್ಲೇ ಒಬ್ಬನೇ ಮಾವಾ. ನಾಗೂ, ಹೋದ್ನಲ್ಲೇ—ನಿಮ್ಮಪ್ಪ. ಅಯ್ಯೋ!

ನಾಗಮ್ಮ: ಇದೇನೊಂದ್ರೆ? ಅವಾ ತಂತಿ ಬಂದಿತೆಂದರೆ ಅಳೋದೇ? ಅದೇನಂತ ನೋಡಬಾರ್ದೇ?

ಪೋ: ಅಳಬೇಡಿ ಜೋಯಿಸರೇ. ಅಳಬೇಡಿ. ಸತ್ತವರು ಎಂದಾದರೂ ಬರ್ತಾರೆಯೇ? ಸತ್ತವರಂತೂ ಹೋದ್ರು. ನೀವ್ಯಾಕಳೋದು? ಹೋಗಿ ಸ್ನಾನಾ ಮಾಡಿ ಕೆರೇಲಿ.

ತಿಮ್ಮ: (ಪ್ರವೇಶ) ಅವ್ವಾ, ಅವ್ರಿಲ್ಲಾ. ಅವ್ರು ಹೋದ್ರು.

ನಾಗಮ್ಮ: ಅಯ್ಯೋ, ಏನೊ ಅದು? ಪಕ್ಕಮ್ಮನವರು ಹೋದ್ರೇ? ಅಯ್ಯೋ ಗ್ರಾಚಾರವೇ? ಹಪ್ಳಾ ಮಾಡ್ಲಿಕ್ಕೆ ಬರ್ತೇನೇಂತ ಅಂದಿದ್ಲಲ್ವೇ?

ಸತ್ಯಮ್ಮಾ ಸತ್ಯಮ್ಮಾ. ಬೆಳಿಗ್ಗೆ ಬಾವಿಕಟ್ಟೆಯಲ್ಲಿ ನಿಂತಿದ್ದೆಯಲ್ಲೇ ಸತ್ಯಮ್ಮಾ? ಅಯ್ಯೋ ಹೋದ್ಯೇನೋ? (ಅಳುವಳು.)

ಪೋ: (ಅಳುತ್ತಾ) ಅಳಬೇಡಿಯಮ್ಮಾ ಅಳ್ಬೇಡಿ. ಅಪ್ಪ ನಿಮ್ಮಪ್ಪ ಹೋದ್ರೂಂತ ಅಳ್ತಾರೆ. ನೀವು ಸತ್ಯಮ್ಮ ಹೋದ್ರೂಂತ ಅಳ್ತೀರಿ. ನೀವಿಬ್ರೂ ಅತ್ರೆ ನನ್ಗೂ ಅಳು ಬರ್ತದೆಯಪ್ಪಾ. ಅಯ್ಯೋ ಽ ಽ ಽ ಽ ಽ ಽ (ಅಳುತ್ತಾನೆ.)

ತಿಮ್ಮ: ಒಡಿಯಾ? ಯಾರು ಸತ್ರೋ? ಯಾರು ಸತ್ರೋ? ಅಮ್ಮಾ ಯಾರು ಸತ್ರೋ? ಯಾರು ಸತ್ರು? (ಅಳುವನು.)

ಜೋಶಿ: (ಅಳುವನು.)

(ಎಲ್ಲರೂ ಅಳುವರು.)

(ತೆಂಗಿನಕಾಯಿ, ತರಕಾರಿಯೊಂದಿಗೆ ಶುಕ್ರಯ್ಯನ ಪ್ರವೇಶ.)

ಶುಕ್ರ: ಬುದ್ಧೀ! ಬುದ್ಧೀ! ತೆಂಕದಾಗೀನ್ ತೆಂಗೀನ ಮರ್ದ ಎರಡು ತೆಂಗಿನಕಾಯಿ, ತರಕಾರಿ, ಐದು ರೂಪಾಯಿ, ಒಂದು ಮಾನ್ಗಿ ಅಕ್ಕಿ ಎಲ್ಲಾ ತಂದೀನ್ ಬುದ್ಧಿ. ಅಯ್ಯೋ ಇದೇನು? ಎಲ್ಲಾರೂ ಅಳ್ತಾ ಇದ್ದಾರಲ್ಲ? ರಾಮಾ ರಾಮಾ! ಅಯ್ಯೋಯ್ಯೋ ಽ ಽ ಽ ಽ.

ತಿಮ್ಮ: ಹೇ, ನೀನ್ಯಾಕಳ್ತೀಯೋ? ಸತ್ರೆ ನಮ್ಮಮ್ಮಾವ್ರ ಅಪ್ಪಾವ್ರು ಸತ್ರು. ಹೋದ್ರೆ ಪಕ್ಕದ್ಮನೆ ಸತ್ಯಮ್ಮ ಹೋದ್ರು.

ಪೋ: ಸತ್ಯಮ್ಮಾ ಸತ್ರು? ಈಗಾಗ್ಲೇ ಅವರಿಗೆ ಪತ್ರಾ ಕೊಟ್ಬಂದೆ. ಯಾರು ಹೇಳಿದ್ದು ಸತ್ರೂಂತ?

ತಿಮ್ಮ: ಯಾರು ಹೇಳಿದ್ದು ಸತ್ರೂಂತ?

ನಾಗಮ್ಮ: ಏ, ಈವಾಗ್ ನೀನೇ ಹೇಳಿದ್ಯಲ್ಲೋ? ಹೋದ್ರೂ ಅಂತ.

ತಿಮ್ಮ: ಅಯ್ಯೋ ಅಯ್ಯೋ! ಅವ್ರು ಹೋದ್ದು ರಾಮಾಚಾರಿ ಮನೆ ಶ್ರಾದ್ಧಕ್ಕಂತೆ. ಅವರ ಮಗಳು ಹೇಳಿದ್ರು.

ಜೋಶಿ: ಹೋ............ರಾಮಾಚಾರಿ ಮನೆ ಶ್ರಾದ್ಧ. ನಾಗೂ, ನನ್ನ ಪಂಚಾಗ ಎಲ್ಲೇ?

ಪೋ: ರಾಯರೇ, ಪಂಚಾಂಗ ಅಲ್ಲೇ ಟೆಲಿಗ್ರಾಂ ಕವರಿನ ಅಡಿಯಾಗೆ ಇದೆಯಲ್ಲಾ?

ಜೋಶಿ: ಟೆಲಿಗ್ರಾಂ. ಅದೇನೋ ಟೆಲಿಗ್ರಾಮಂ?

ಪೋ: ಟೆಲಿಗ್ರಾಂ ಅಲ್ಲ. ತಂತಿ ತಂತಿ.

ಜೋಶಿ: ಅಯ್ಯಯ್ಯೋ ತಂತಿಯೋ? (ಬೀಳುವನು.) ಹೋದ್ಯಲ್ಲೋ ಮಾವಯ್ಯಾ?

ನಾಗಮ್ಮ: ಅದ್ಯಾಕೆ ಅಳ್ತೀರಂದ್ರೆ? ತಂತೀಲಿ ಏನು ಬರ್ತಿದೆ ಅಂತ ನೋಡ್ಬಾರ್ದೇ?

ಜೋಶಿ: ನನ್ಗೆಲ್ಲಿ ಬರುತ್ತೆ ನೋಡುಕೆ?

ನಾಗಮ್ಮ: ಏಯ್ ನೀನಾರಾ ಹೇಳು. ಏನ್ ಬರ್ದಿದೆ ಅಂತಾ.

(ಪೋಸ್ಟ್‌ಮೆನ್‌ನ ಕೈಗೆ ಕವರನ್ನು ಕೊಡುವಳು. ಅದನ್ನು ಒಡೆದು ಓದುವನು)

ಪೋ: ಸೆಂಟ ಹಂಡ್ರೆಡ್ ಪಂಚಾಂಗಂ. ಪ್ಲೀಜ ಟೇಕ್ ಇಟ್.

ಜೋಶಿ: ಅದೇನೋ ಸೆಂಟೂ ಅಂತಾ ಬರ್ದಿದ್ದಿಯಲ್ಲೋ? ಅವನ್ಯಾವನೋ ಅವನು ನನಗೆ ಸೆಂಟ್ ಕಳಿಸಿದವನು.

ಪೋ: Sent ಅಲ್ಲಾ ರಾಯರೇ. ನೂರು ಪಂಚಾಂಗ ಕಳ್ಸಿದ್ದೀನಿ ಅಂತ.

ಜೋಶಿ: ನೂರು ಪಂಚಾಂಗ! ಅಯ್ಯೋಯ್ಯೋ ನೂರು ಪಂಚಾಂಗ! ನಾಗೂ, ನಾಗೂ ಹೋಗೇ ದೇವರಿಗೆ ದೀಪಹಚ್ಚಿಡು! ನೂರು ಪಂಚಾಂಗ! ಅಯ್ಯೋ ನೂರು ಪಂಚಾಂಗ! (ಮೂರ್ಛೆ ಹೊಂದುವನು.)

ನಾಗಮ್ಮ: ಅಯ್ಯಯೋ. ನಿಮಗೇನಾಯಿತೂಂದ್ರೆ? ಶಿವಮ್ಮಾ ಹೋಗೋ ನೀರ್ ತಕೊಂಡ್ಬಾರೋ. (ಶಿವ್ಮ ಓಡುವನು.) ಹೋಗಿ ಡಾಕ್ಟರನ್ನು ಕರೆದುಕೊಂಡು ಬಾರೋ! ಯಾವಾಗಲೂ ಹೀಗೆ ಇವರು. (ಪೋಸ್ಟ್‌ಮನ್‌ನೊಡನೆ ಹೇಳುವಳು.)

ಪೋ: ಆಯ್ತಮ್ಮ ಈಗ ಬಂದೆ. (ಹೋಗುವನು.)

ತುಕ್ರ: ಬುದ್ಧೀ, ನನ್ನ ಕೂಸು..........(ಎದ್ದು ಗಾಳಿ ಹಾಕುವನು.)

ನಾಗಮ್ಮ: ನಿನ್ನ ಕೂಸು ಹಾಳಾಗಿ ಹೋಗ್ಲಿ.

(ಜೋಶಿ ಬಡಬಡಿಸುತ್ತಿರುವನು.) ನೂರು ಪಂಚಾಗ. ಪಂಚಾಂಗ ನೂರು. ಮೇಷ, ವೃಷಭ, ಮಿಥುನ, ಶನಿ, ರಾಹು, ಕೇತು. ನಾಗೂ, ನನ್ನ ಕನ್ನಡಕ ತಗೊಂಡು ಬಾರೇ! (ಏಳುವಳು.)

ನಾಗಮ್ಮ: ಇದೇನೂಂದ್ರೆ? ಕನ್ನಡಕ ಹಣೇ ಮೇಲೆ ಇದೆಯಲ್ಲಾ!

ಜೋಶಿ: ಅಯ್ಯೋ! ಅಯ್ಯೋ! ನನಗಂತೂ ಮರೆವೂ! ಮರೆವು!

(ತೆರೆ ಬೀಳುವುದು.)

Edited, Printed & Published by K. V. Shenoy
at The Prabhat Printers, Ltd., Mangalore.